ಶಾಸನಸಭೆಗೆ ಸಂಬಂಧಪಟ್ಟಂಥ ವಿಚಾರಕ್ಕೆ ಒಂದು ದಿವಸವೋ ಅಥವಾ ಅರ್ಧ ಗಂಟೆಯಾದರೂ ಚರ್ಚೆಗೆ ತಾವು ಅವಕಾಶ ಮಾಡಿಕೊಡಬೇಕು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಅಕ್ರಮ ದಲಾಲಿ ವಸೂಲಾತಿಯನ್ನು ತಡೆಗಟ್ಟುವುದು

324 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ವ್ಯವಸಾಯೋತ್ಪನ್ನ ಮಾರುಕಟ್ಟೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಎ.ಪಿ.ಎಂ.ಸಿ. ಯಾರ್ಡ್‌ನಲ್ಲಿ ರೈತರು ಉತ್ಪಾದನೆಯನ್ನು ಮಾರಾಟ ಮಾಡಿದಾಗ ದಲಾಲರು ರೈತರಿಂದ ಗೈರು ಖಾನೂನಾಗಿ ದಲಾಲಿ ವಸೂಲಿ ಮಾಡುವುದನ್ನು ತಡೆಗಟ್ಟುವುದಕ್ಕೆ ಎ.ಪಿ.ಎಂ.ಸಿ. ಮುಖಾಂತರ ರೈತರ ಉತ್ಪನ್ನದ ಹಣವನ್ನು ಬಟವಾಡೆ ಮಾಡುವುದಾಗಿ ಮಾನ್ಯ ಮುಖ್ಯಮಂತ್ರಿಗಳು ಭರವಸೆ ಕೊಟ್ಟಿರುವುದು ನಿಜವೇ;

ಆ) ಹಾಗಿದ್ದಲ್ಲಿ ಇದನ್ನು ಇನ್ನೆಷ್ಟು ದಿನಗಳಲ್ಲಿ ಕಾರ್ಯಗತಗೊಳಿಸಲಾಗುವುದು.

ಇ) ರೈತರಿಗೆ ಎ.ಪಿ.ಎಂ.ಸಿ. ಯಾರ್ಡ್‌ನಲ್ಲಿ ಆಗುತ್ತಿರುವ ಶೋಷಣೆಯನ್ನು ತಪ್ಪಿಸುವ ಸಲುವಾಗಿ ಅಲ್ಲಿ ಚುನಾವಣೆ ನಡೆಸಿ ರೈತ ಪ್ರತಿನಿಧಿಗಳಿಗೆ ಅಧಿಕಾರ ಹಸ್ತಾಂತರ ಯಾವಾಗ ಮಾಡಲಾಗುವುದು?

ಶ್ರೀ ರಾಮಲಿಂಗರೆಡ್ಡಿ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ಹೌದು.

ಆ) ಈ ವಿಷಯ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದ್ದು ಶೀಘ್ರಕ್ರಮ ಕೈಗೊಳ್ಳಲಾಗುವುದು.

ಇ) ರಾಜ್ಯದಲ್ಲಿ ಮುಂಬರುವ ಸಾರ್ವತ್ರಿಕ ಚುನಾವಣೆಗಳು ಸಮೀಪಿಸುತ್ತಿರುವ ಕಾರಣದಿಂದ ರಾಜ್ಯದಲ್ಲಿಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಚುನಾವಣೆ ನಡೆಸಲು ಸಾಧ್ಯವಾಗಲಾರದೆಂದು ಸರ್ಕಾರವು ತೀರ್ಮಾನ ತೆಗೆದುಕೊಂಡಿದೆ.

ಶ್ರೀ ಡಿ.ಆರ . ಪಾಟೀಲ್ : ಮಾನ್ಯ ಅಧ್ಯಕ್ಷರೇ, ಗೈರು ಖಾನೂನಾಗಿ ರೈತರಿಂದ ಮಾರುಕಟ್ಟೆಯಲ್ಲಿ ಸುಮಾರು ನೂರಾರು ಕೋಟಿ ರೂಪಾಯಿಗಳನ್ನು ದಲಾಲಿ ವಸೂಲು ಮಾಡುತ್ತಿದ್ದಾರೆ ಎನ್ನುವುದನ್ನು ಸರ್ಕಾರವೇ ಒಪ್ಪಿ ಅದನ್ನು ತಡೆಗಟ್ಟುವ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಇನ್ನೂ ಕೂಡ ಸರ್ಕಾರ ಪರಿಶೀಲಿಸುತ್ತಿದೆ ಎನ್ನುವ ಉತ್ತರ ಕೊಟ್ಟಿರುವುದು ಅಷ್ಟು ಸಮಂಜಸ ಎನಿಸುವುದಿಲ್ಲ. ಆದ್ದರಿಂದ ಮಂತ್ರಿಗಳು ಇದರ ಬಗ್ಗೆ ನಿಶ್ಚಿತ ದಿನಾಂಕವನ್ನು ಹೇಳಬೇಕು.

ಶ್ರೀ ರಾಮಲಿಂಗಾರೆಡ್ಡಿ : ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರು ಕೇಳಿದ ಹಾಗೆ ನಿಶ್ಚಿತ ದಿನಾಂಕವನ್ನು ಕೊಡುವುದಕ್ಕಾಗುವುದಿಲ್ಲ. ತಾವೇನು ಒಂದು ಪ್ರಶ್ನೆಯನ್ನು ಹಾಕಿದ್ದೀರಿ, ಇದು ಬಹಳ ಒಳ್ಳೆಯದು. ಇದು ರೈತರಿಗೆ ಅನುಕೂಲವಾಗುವಂಥ ಒಂದು ಕಾರ್ಯಕ್ರಮ. ಸನ್ಮಾನ್ಯ ಮುಖ್ಯಮಂತ್ರಿಗಳು ಕೂಡ ಬೆಳಗಾಂನಲ್ಲಿ ಹೇಳಿದ್ದನ್ನು ಹಿಂದೂ ಪತ್ರಿಕೆಯಲ್ಲಿ ಬಂದಿದ್ದನ್ನು ನಾನು ಓದಿದೆ. ನಮಗೆ ಇನ್ನೂ ಆದೇಶ ಬಂದಿಲ್ಲ. ಇದರ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸುತ್ತಿದ್ದೇವೆ. ಈ ಒಂದು ಕಾರ್ಯಕ್ರಮವನ್ನು ನಾವು ಮಾಡಬೇಕಾದರೆ ಎಪಿಎಂಸಿ ವತಿಯಿಂದ ಹಣವನ್ನು ಕೊಡಬೇಕಾದರೆ ನಮಗೆ ಈಗ ಇರತಕ್ಕಂಥ ಸಿಬ್ಬಂದಿ ಕೂಡ ಸಾಕಾಗುವುದಿಲ್ಲ. ನಮಗೆ ಇದಕ್ಕೆ ಕೋಟಿಗಟ್ಟಲೆ ಹಣ ಕೂಡ ಬೇಕಾಗುತ್ತದೆ. ನಮ್ಮ ಕರ್ನಾಟಕ

ರಾಜ್ಯದಲ್ಲಿ ಸುಮಾರು 3700 ಕೋಟಿ ರೂಪಾಯಿಯಷ್ಟು ಹಣ ಈ ಒಂದು ಎಪಿಎಂಸಿಗಳಲ್ಲಿ ವಹಿವಾಟಾಗುತ್ತಿದೆ. ಆದುದರಿಂದ ಇದರ ಬಗ್ಗೆ ನಾವು ಪರಿಶೀಲಿಸುತ್ತಿದ್ದೇವೆ. ತಮಗೆ ಬೇಕಾದರೆ ಈ ಅಧಿವೇಶನ ಮುಗಿಯುವುದಕ್ಕಿಂತ ಮುಂಚೆಯೇ ತಮ್ಮನ್ನು ಮತ್ತು ಇದರಲ್ಲಿ ಆಸಕ್ತಿ ಇರತಕ್ಕಂಥ ಎಲ್ಲ ಸದಸ್ಯರುಗಳನ್ನೂ ಕರೆದು ಇದಕ್ಕಾಗಿ ಒಂದು ಸಭೆಯನ್ನು ಕೂಡ ಏರ್ಪಾಡು ಮಾಡುತ್ತೇನೆ.

ಶ್ರೀ ಡಿ.ಆರ್. ಪಾಟೀಲ್ : ಎಪಿಎಂಸಿಯವರು ತಮ್ಮ ಹಣವನ್ನು ಇದಕ್ಕೆ ಕೊಡಬೇಕಾಗಿಲ್ಲ. ದಲಾಲರು ರೈತರಿಗೆ ಕೊಡತಕ್ಕಂಥ ಹಣವನ್ನು ಎಪಿಎಂಸಿ ಮುಖಾಂತರ ಕೊಡುವ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಇದಕ್ಕೇನು ಎಪಿಎಂಸಿಯವರ ಹಣ ಬೇಕಾಗಿಲ್ಲ. ಮತ್ತು ಬಹಳ ಹೆಚ್ಚಿನ ಸಿಬ್ಬಂದಿಯೂ ಕೂಡ ಬೇಕಾಗುವುದಿಲ್ಲ. ಅವರೆಲ್ಲ ಲೆಕ್ಕ ಮಾಡಿ ಪಟ್ಟಿಯನ್ನು ಇಟ್ಟಿರುತ್ತಾರೆ. ದಯವಿಟ್ಟು ಬೇಗ ಇದನ್ನು ಕಾರ್ಯಗತ ಮಾಡುವುದಕ್ಕೆ ತಾವು ಭರವಸೆಯನ್ನು ಕೊಡಬೇಕು.

ಶ್ರೀ ರಾಮಲಿಂಗಾರೆಡ್ಡಿ : ಮಾನ್ಯ ಅಧ್ಯಕ್ಷರೇ, ರೈತರು ಏನು ಒಂದು ಮಾಲನ್ನು ತರುತ್ತಾರೆ, ಅದಕ್ಕೆ ಹಣವನ್ನು ಕೊಡುವುದು ಏನು ಇದೆ ಆ ವ್ಯವಸ್ಥೆಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಹತ್ತಿ ಇಂಥದ್ದು ತಮಗೆಲ್ಲಾ ಗೊತ್ತು. ಅದೇನು ಮಾರಾಟವಾಗುವುದಿಲ್ಲ. ಅಂಥ ಸಮಯದಲ್ಲಿ ಎಪಿಎಂಸಿ ಹಣವನ್ನು ಕೊಡಬೇಕಾದರೆ ನಮಗೆ ಕೋಟಿಗಟ್ಟಲೆ ಹಣ ಬೇಕಾಗುತ್ತದೆ. ಇದನ್ನು ನಾವು ಪರಿಶೀಲಿಸುತ್ತಿದ್ದೇವೆ.

ಪ್ರೊ॥ ಎಂ.ಡಿ. ನಂಜುಂಡಸ್ವಾಮಿ : ಸನ್ಮಾನ್ಯ ಸಭಾಧ್ಯಕ್ಷರೇ, ಈ ಹೊಸ ವ್ಯವಸ್ಥೆ ಬಗ್ಗೆ ನಮ್ಮ ಸರ್ಕಾರ, ಮುಖ್ಯಮಂತ್ರಿಗಳಾಗಲಿ ಕೃಷಿ ಮಾರುಕಟ್ಟೆ ಮಂತ್ರಿಗಳಾಗಲಿ ಯಾವುದೇ ಸಿದ್ಧತೆಯನ್ನು ಮಾಡಿಕೊಳ್ಳದೆ ಒಂದು ಪ್ರಕಟಣೆಯನ್ನು ಒಂದು ಪ್ರಕಟಣೆಯನ್ನು ಮಾಡಿದಂತೆ ಕಾಣುತ್ತದೆ. ಪ್ರಾಮಾಣಿಕತೆ ಇದನ್ನು ಅನುಷ್ಠಾನಕ್ಕೆ ತರಬೇಕು ಎನ್ನುವುದಾದರೆ ಎಲ್ಲಾ ವಿಚಾರವನ್ನು ಆಲೋಚನೆ ಮಾಡಿ ಪ್ರಕಟಣೆಯನ್ನು ಮಾಡಬೇಕಾಗಿತ್ತು. ಇಲ್ಲದಿದ್ದರೆ ನಮಗೇನು ಗುಮಾನಿ ಬರುತ್ತದೆ ಎಂದರೆ ಚುನಾವಣೆಯ ದೃಷ್ಟಿಯಿಂದ ಈ ಮಾತನ್ನು ಆಡುತ್ತಿದ್ದಾರೆ ಎಂದು ಅನಿಸುತ್ತದೆ. ಖರೀದಿಯನ್ನೂ ಮಾಡುವುದಿಲ್ಲ, ಇಲ್ಲಾ ದಲಾಲರು ಸಂಪು ಹೂಡಬಹುದು. ಇದನ್ನೆಲ್ಲಾ ಆಲೋಚನೆ ಮಾಡಿ ಸಿದ್ಧತೆಯನ್ನು ಮಾಡಿಕೊಳ್ಳಬೇಕು ತಾನೆ. ನೀವು ಒಂದು ಹರಾಜನ್ನು ಕೂಗುವವರು ಮೊದಲು ಮಾರುಕಟ್ಟೆಯಲ್ಲಿ ಹಣ ಡಿಪಾಸಿಟ್ ಇಟ್ಟು ಆ ನಂತರ ಮಾರುಕಟ್ಟೆಯವರೇ ಚೆಕ್ ಕೊಡುವ ರೀತಿಯಲ್ಲಿ ವ್ಯವಸ್ಥೆ ಮಾಡಿದರೆ ಸಾಕು. ಅಷ್ಟನ್ನಾದರೂ ಮಾಡಿ. ನಿಮ್ಮ ಹತ್ತಿರ ಒಂದು ಬೆಳೆಯನ್ನು ಖರೀದಿ ಮಾಡುವುದಕ್ಕೂ ಹಣ ಇಲ್ಲ. ಅದಕ್ಕೆ ಸಿದ್ಧತೆ ಮಾಡಿಕೊಳ್ಳಬೇಕಾದರೆ ದಲಾಲರು ಮತ್ತು ವ್ಯಾಪಾರಿಗಳು ಎಲ್ಲಿಂದ ಹಣವನ್ನು ಸಂಗ್ರಹಣೆ ಮಾಡುತ್ತಾರೆ, ಅದರ ವ್ಯವಸ್ಥೆಯನ್ನೇನಾದರೂ ಸರ್ಕಾರ ಮಾಡುತ್ತದೆಯೇ ಎಂದು ನಾನು ಕೇಳುತ್ತೇನೆ.

ಶ್ರೀ ರಾಮಲಿಂಗಾರೆಡ್ಡಿ : ಮಾನ್ಯ ಅಧ್ಯಕ್ಷರೇ, ನಾನು ಇದರ ಬಗ್ಗೆ ಎಲ್ಲಿಯೂ ಕಮಿಟ್ಮೆಂಟ್ ಮಾಡಿಲ್ಲ. ಸನ್ಮಾನ್ಯ ಡಿ.ಆರ್. ಪಾಟೀಲರು ಹೇಳಿದ ಹಾಗೆ ನಾನೆಲ್ಲೂ ಕಮಿಟ್ ಆಗಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಬೆಳಗಾಂನಲ್ಲಿ ಹೇಳಿದ್ದಾರೆ, ಎಂದು ಹಿಂದೂ ಪತ್ರಿಕೆಯಲ್ಲಿ ಬಂದಿದೆ. ಅದನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅದು ಹಿಂದೂಪತ್ರಿಕೆಯಲ್ಲಿ ಬಂದಿದೆ ಎಂದು ನಾನು ಹೇಳಿದ್ದೇನೆ, ಅಷ್ಟೆ. ಇದರ ಬಗ್ಗೆ ಎಲ್ಲಿಯೂ ಕಮಿಟ್ಮೆಂಟ್ ಆಗಿಲ್ಲ. ರೈತರಿಗೆ ಸಹಾಯ ಮಾಡಬೇಕು ಎನ್ನತಕ್ಕಂಥದ್ದು ನಮ್ಮ ಉದ್ದೇಶ ಇದೆ. ಆ ದಿಕ್ಕಿನಲ್ಲಿ ನಾವು ಖಂಡಿತವಾಗಿಯೂ ಎಲ್ಲರನ್ನೂ ಕರೆಯುತ್ತೇವೆ. ತಾವುಗಳು ಸಲಹೆ ಸೂಚನೆಯನ್ನು ಕೊಡಿ. ಅದನ್ನು ಮಾಡುವುದಕ್ಕೆ ತಾವು ಒಳ್ಳೆಯ ಸಲಹೆಯನ್ನು ಕೊಟ್ಟರೆ ಅದನ್ನು ಸ್ವೀಕಾರ ಮಾಡುವುದಕ್ಕೆ ಸಿದ್ಧರಾಗಿದ್ದೇವೆ.

ಪ್ರೊ॥ ಎಂ.ಡಿ. ನಂಜುಂಡಸ್ವಾಮಿ : ಅಂದರೆ ಮಾರುಕಟ್ಟೆ ಮಂತ್ರಿಗಳ ಗಮನಕ್ಕೆ ತರದೆ ಮುಖ್ಯಮಂತ್ರಿಗಳು ಈ ಒಂದು ಕಾರ್ಯಕ್ರಮವನ್ನು ಘೋಷಣೆ ಮಾಡಿದ್ದಾರೆ. ಆದ್ದರಿಂದ ಇದರ ಬಗ್ಗೆ ಮುಖ್ಯಮಂತ್ರಿಗಳನ್ನೇ ಕೇಳಬೇಕು ಎಂದಾಗುತ್ತದೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ರೆಗ್ಯುಲೇಟೆಡ್ ಮಾರ್ಕೆಟ್ ಮಿನಿಸ್ಟರ್ ಅವರು ಈ ಅಗ್ರಿಕಲ್ಚರಲ್ ಪ್ರೊಡ್ಯೂಸ್ಗಳನ್ನು ಗೋಡೌನ್ನಲ್ಲಿ ಇಟ್ಟುಕೊಂಡು ಹಣ ಕೊಡತಕ್ಕ ಒಂದು ಕಾರ್ಯಕ್ರಮ ಮಾಡುವ ವಿಷಯದಲ್ಲಿ ಹೇಳುತ್ತಿದ್ದಾರೆ. ಎಪಿಎಂಸಿಯಲ್ಲಿ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿ ಮಾಡುವ ಕೆಲಸವನ್ನು ತಾವು ಏಕೆ ಮಾಡುತ್ತಿದ್ದೀರಿ? ಎಂಬ ಪ್ರಶ್ನೆ ಕೇಳುತ್ತಿದ್ದೇನೆ. ನಿಮ್ಮ ಕಡೆ ಎಷ್ಟು ಹಣ ಇದೆ. ಈ ಹಣದ ಯೋಜನೆಯನ್ನು ತಾವು ರೂಪಣೆ ಮಾಡಿದ್ದೀರಾ ಎಂದು ಕೇಳುತ್ತಿದ್ದೇನೆ. ಇದರ ಜೊತೆಯಲ್ಲಿ ಈಗಾಗಲೇ ಎಷ್ಟು ಜನರಿಗೆ ಈ ತರಹ ಅಡ್ವಾನ್ಸ್ ಕೊಟ್ಟಿದ್ದೀರಿ? ಅದನ್ನು ವಾಪಸ್ ಯಾವ ತರಹ ಪಡೆಯುತ್ತೀರಿ? ಯಾರ ಕಡೆಯಿಂದ ಆ ಮಾಲು ಮಾರುವುದು? ವ್ಯಾಪಾರಸ್ಥರ ಕಡೆಯಿಂದ ಮಾರುತ್ತೀರೋ ಅಥವಾ ನೇರವಾಗಿ ಬಿಕರಿ ಮಾಡುತ್ತೀರೋ? ಇದರಿಂದ ಅಂದರೆ ಎಪಿಎಂಸಿಯಿಂದ ರೈತರಿಗೆ ಯಾವ ಪ್ರಯೋಜನ ಆಗುತ್ತದೆ ಎಂದು ಕೇಳುತ್ತಿದ್ದೇನೆ.

ಶ್ರೀ ರಾಮಲಿಂಗಾರೆಡ್ಡಿ : ಈ ಪ್ರಶ್ನೆ ಬರುವುದಿಲ್ಲ. ನಾವು ಎಲ್ಲೂ ಅಡ್ವಾನ್ಸ್ ಕೊಟ್ಟಿಲ್ಲ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಪ್ರಶ್ನೆ ಇದೆ. ನೀವು ಕೆಲವೊಂದು ವಿಷಯಗಳನ್ನು ಹೇಳಿದ್ದೀರಿ. ಈಗಾಗಲೇ ಪ್ರೊಫೆಸರ್ ಅವರು ಹೇಳಿದ ಪ್ರಕಾರ ಮುಂದೆ ಬರತಕ್ಕ ಚುನಾವಣೆಯನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಮಾಡುತ್ತಿದ್ದಿರೋ ಎಂದು ಕೇಳುತ್ತೇನೆ. ಅಡ್ವಾನ್ಸ್ ಕೊಡತಕ್ಕ ಕಾರ್ಯಕ್ರಮ ಕೂಡ ಇದರಲ್ಲಿ ಬರುತ್ತದೆ. ಯಾರ ಮುಖೇನ ಮಾಲು ಮಾರುತ್ತೀರಿ? ಕಮಿಷನ್ ಜಾಸ್ತಿ ಪಡೆಯತಕ್ಕ ವ್ಯಾಪಾರಸ್ಥರ ಮೇಲೆ ಇದರಿಂದ ಕಂಟ್ರೋಲ್ ಬರುತ್ತದೆಯೇ? ಆ ಉದ್ದೇಶ ಇಟ್ಟುಕೊಂಡು ಮಾಡುತ್ತಿದ್ದೀರೋ ಎಂದು ಕೇಳುತ್ತಿದ್ದೇನೆ.

ಶ್ರೀ ರಾಮಲಿಂಗಾರೆಡ್ಡಿ : ಈ ಪ್ರಶ್ನೆ ಇಲ್ಲಿ ಇಲ್ಲ. ನಾವು ಎಲ್ಲೂ ಅಡ್ವಾನ್ಸ್ ಕೊಟ್ಟಿಲ್ಲ. ಮಾನ್ಯ ಪಾಟೀಲರು ಎಪಿಎಂಸಿಯಿಂದ ಉತ್ಪನ್ನ ತಂದಾಗ ನೇರವಾಗಿ ಎಪಿಎಂಸಿ ಹಣ ಕೊಡುವ ವ್ಯವಸ್ಥೆ ಮಾಡಿ ಎಂದು ಕೇಳುತ್ತಿದ್ದಾರೆ. ನಾವು ಅಡ್ವಾನ್ಸ್ ಕೊಟ್ಟಿಲ್ಲ. ಮಾನ್ಯ ಸದಸ್ಯರು ಪ್ಲೆಜ್ಡ್ ಲೋನ್ ಬಗ್ಗೆ ಕನ್ಫ್ಯೂಸ್ ಮಾಡಿಕೊಂಡಿರಬಹುದು.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಬೆಳಗಾವಿಯಲ್ಲಿ ಹೇಳಿದಂತಸ ವಿಚಾರವನ್ನು ಮಾನ್ಯ ಮಂತ್ರಿಗಳು ಪ್ರಸ್ತಾಪ ಮಾಡಿದ್ದಾರೆ. ಇದು ಮೂಲಭೂತವಾದಂತಹ ಪ್ರಶ್ನೆ. ಜಂಟಿ ಜವಾಬ್ದಾರಿ, ರಾಜ್ಯಾಂಗದತ್ತವಾಗಿ ನಾವು ಮಾಡಿರತಕ್ಕ ನಡವಳಿಕೆಗಳ ಏನು ಇವೆ, ಇದರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆಂದು ನಾನು ಸುದ್ದಿ ಕೇಳಿದ್ದೇನೆಂದು ಹೇಳಿದರೆ ಜವಾಬ್ದಾರಿ ಇಲ್ಲ ಎಂದು ಒಂದು ಮಾತು ಆಯಿತು. ಮಾನ್ಯ ಮುಖ್ಯಮಂತ್ರಿಗಳು ಸುಳ್ಳು ಹೇಳುತ್ತಾರೆ ಎಂದು ಏನು ಜನಜನಿತವಾಗಿದೆ, ಅದರಲ್ಲಿ ಇದೂ ಒಂದೇ. ಜಂಟಿ ಜವಾಬ್ದಾರಿ, it is a fundamental question ಜಂಟಿ ಜವಾಬ್ದಾರಿ ಈ ಸರ್ಕಾರಕ್ಕೆ ಇಲ್ಲ ಎಂದಾಯಿತು. ಜಂಟಿ ಜವಾಬ್ದಾರಿ ಈ ಸರ್ಕಾರಕ್ಕೆ ಇದೆಯೇ ಇಲ್ಲವೇ ಎನ್ನುವುದು ತೀರ್ಮಾನ ಆಗದ ಹೊರತು ಮುಂದಿನ ಪ್ರಶ್ನೆಗೆ ಹೋಗುವುದಕ್ಕೆ ನಾವು ಅವಕಾಶ ಕೊಡುವುದಿಲ್ಲ. There should be some limit for this.

ಶ್ರೀ ರಾಮಲಿಂಗಾರೆಡ್ಡಿ : ಇದರ ಬಗ್ಗೆ ಒಂದು ರಿಪೋರ್ಟ್ ಡಿವಿಷನಲ್ ಕಮೀಷನರ್ ಅವರದ್ದು ಇದೆ. ಇದರ ಬಗ್ಗೆ....

ಅಧ್ಯಕ್ಷರು : ಮೈಕ್ ಹಾಕಿಕೊಳ್ಳಿ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಅವರು ಸದನದಲ್ಲಿ ಇದ್ದಾರೋ ಇಲ್ಲವೋ ಗೊತ್ತಿಲ್ಲ.

ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ : ಅರರ ಗಮನ ಇಲ್ಲಿ ಇಲ್ಲ.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ : ಸದನದ ಕೆಲಸದೊಳಗೆ ಗಮನ ಕೊಡಬೇಕು.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ತಮ್ಮ ಕ್ಯಾಬಿನೆಟ್ ಸಬ್ ಕಮಿಟಿ ಮೀಟಿಂಗ್ ಇಲ್ಲಿ ನಡೆಯುತ್ತಿದೆ. ಅದಕ್ಕೆ ನಾನು ಅಡ್ಡಿ ಬರುವುದಿಲ್ಲ. ಆದರೆ ಮೂಲಭೂತವಾದಂತಹ ಸದನಕ್ಕೆ ಸಂಬಂಧಪಟ್ಟಂಥ ಒಂದು ಪ್ರಶ್ನೆ ಇಲ್ಲಿ ಉದ್ಭವವಾಗಿದೆ. ಈ ಸರ್ಕಾರಕ್ಕೆ ಜವಾಬ್ದಾರಿ ಇದೆಯೋ ಇಲ್ಲವೋ? ಇದು ಮೂಲಭೂತವಾದ ಪ್ರಶ್ನೆ. ಪ್ರೊಫೆಸರ್ ಅವರು ಹೇಳುತ್ತಾ ಸಂಬಂಧಪಟ್ಟ ಮಂತ್ರಿಗಳು ಹೇಳಿದರು, ಮಾನ್ಯ ಮುಖ್ಯಮಂತ್ರಿಗಳು ಬೆಳಗಾವಿಯಲ್ಲಿ ಮಾಡಿರತಕ್ಕ ಹೇಳಿಕೆ ಬಗ್ಗೆ ನನ್ನ ಜೊತೆ ಚರ್ಚೆ ಮಾಡಿಲ್ಲ, ನನ್ನ ಇಲಾಖೆಗೆ ಸಂಬಂಧಪಟ್ಟದ್ದಾದರೂ ಚರ್ಚೆ ಮಾಡಿಲ್ಲ, ಆದ್ದರಿಂದ ಇದು ಸರ್ಕಾರದ ತೀರ್ಮಾನ ಅಲ್ಲ ಎಂದರು. ಆದರೆ ಮಾನ್ಯ ಮುಖ್ಯಮಂತ್ರಿಗಳು ಹೇಳತಕ್ಕ ಪ್ರತಿ ಒಂದು ಮಾತೂ ಇದು ಸರ್ಕಾರದ ತೀರ್ಮಾನ ಅಲ್ಲ ಎಂದು ಹೇಳುವುದಾದರೆ ನೀವು ಜಂಟಿ ಜವಾಬ್ದಾರಿಯಿಂದ ಮಂತ್ರಿಮಂಡಲದಲ್ಲಿ ಕೆಲಸ ಮಾಡುತ್ತಿಲ್ಲ. ಎನ್ನತಕ್ಕ ಮೂಲಭೂತವಾದ ಪ್ರಶ್ನೆ ಬರುತ್ತವೆ. ಇದು ತೀರ್ಮಾನ ಆಗದೇ ನಾವು ಪ್ರಶ್ನೆಗಳನ್ನು ಏನು ಕೇಳುವುದು, ಉತ್ತರ ಏನು ತೆಗೆದುಕೊಳ್ಳುವುದು. ಯಾವ ಮಂತ್ರಿಗಳು ಉತ್ತರ ಹೇಳುತ್ತಾರೆ, ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಂಡು ಬರಬೇಕಾಗುತ್ತದೆ. This is a fundamental question. ಆದ್ದರಿಂದ ಈ ಪ್ರಶ್ನೆ ಇತ್ಯರ್ಥ ಆಗದ ಹೊರತು ಮುಂದಿನ ಪ್ರಶ್ನೆಗೆ ನಾವು ಹೋಗುವುದಕ್ಕೆ ಆಗುವುದಿಲ್ಲ. ಜಂಟಿ ಜವಾಬ್ದಾರಿ ಇದೆಯೇ ಅಥವಾ ಇಲ್ಲವೇ? ಇಲ್ಲದಿದ್ದರೆ ಅವರು ಇರಬೇಕು ಇಲ್ಲವೇ ಮಾನ್ಯ ಮುಖ್ಯಮಂತ್ರಿಗಳು ಇರಬೇಕು. ಇಬ್ಬರೂ ಒಂದೇ ಕಡೆ ಇರುವುದಕ್ಕೆ ಆಗುವುದಿಲ್ಲ. ಇಲಾಖೆಯಲ್ಲಿರತಕ್ಕ ದೋಷವನ್ನು ಅಥವಾ ತಮ್ಮಲ್ಲಿರತಕ್ಕ ಭಿನ್ನಾಭಿಪ್ರಾಯವನ್ನು ತಿಳಿಸಬೇಕೆಂದು ನಾನು ವಿವರಣೆ ಕೇಳುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಯಾವ ತರಹ ಮಾಡುತ್ತೀರಿ? ಅವರು ಈ ವಿಚಾರ ಹೇಳಿದರೆ ಉತ್ತರ ಹೇಳಲು ಅವಕಾಶ ಆಗುತ್ತದೆ. ನಾನೂ ಸಹ ಎಪಿಎಂಸಿ ಛೇರ್ಮನ್ ಆಗಿ, ಸ್ಟೇಟ್ ಮಾರ್ಕೆಟಿಂಗ್ ಬೋರ್ಡ್ ಮೆಂಬರ್ ಆಗಿ ಕೆಲಸ ಮಾಡಿದ್ದೇನೆ. ನೀವು ನೇರವಾಗಿ ಹಣವನ್ನು ಎಪಿಎಂಸಿ ಮುಖಾಂತರ ರೈತರಿಗೆ ಕೊಡುತ್ತೇವೆ ಎಂದರೆ ಯಾವ ರೀತಿ ಕೊಡುತ್ತೀರಿ?

ಶ್ರೀ ರಾಮಲಿಂಗಾರೆಡ್ಡಿ : ನಾವು ಕೊಡುತ್ತಾ ಇಲ್ಲ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಯಾವ ರೀತಿ ಹಣ ಕೊಡಿಸುತ್ತೀರಿ? ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ ಎಂದು ನಾನು ಹೇಳುವುದು.

ಶ್ರೀ ರಾಮಲಿಂಗಾರೆಡ್ಡಿ : ನಾನು ಉತ್ತರ ಕೊಡುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್: ಇದು ಸೀರಿಯಸ್ ಪ್ರಶ್ನೆ. ಮಾನ್ಯ ಸದಸ್ಯರು ಕೇಳುವ ಪ್ರಶ್ನೆಗೆ ಉತ್ತರ ಕೊಡುವ ಕಾಲದಲ್ಲಿ ಸರಿಯಾದ ಮಾಹಿತಿ ಹೇಳಬೇಕು. ಯಾವ ತರಹ ಕೊಡುತ್ತಾರೆ?

ಯಾವ ರೀತಿ ಹಣವನ್ನು ಕೊಡುತ್ತೀರಿ? ಚೆಕ್ ಮೂಲಕ ಕೊಡುತ್ತೀರೋ ಅಥವಾ ನೇರವಾಗಿ ಕೊಡುತ್ತೀರೋ?

ಶ್ರೀ ರಾಮಲಿಂಗಾರೆಡ್ಡಿ : ಅದಕ್ಕೆ ನಾವು ಕಮಿಟ್ಮೆಂಟ್ ಆಗಿಲ್ಲ, ಪರಿಶೀಲಿಸುತ್ತೇವೆ ಎಂದು ಹೇಳಿತ್ತಿದ್ದೇವೆ.

ಶ್ರೀ ಎಚ್. ವಿಶ್ವಾನಾಥಯ್ಯ : ಮಾನ್ಯ ಮಾರುಕಟ್ಟೆ ಇಲಾಖೆಯ ರಾಜ್ಯ ಸಚಿವರು ನಿರ್ದಿಷ್ಟವಾಗಿ ಉತ್ತರ ಕೊಟ್ಟಿದ್ದಾರೆ. ಪ್ರಶ್ನೆ ಏನೆಂದರೆ, ಎ.ಪಿ.ಎಂ.ಸಿ. ಮುಖಾಂತರ ರೈತರ ಉತ್ಪನ್ನದ ಹಣವನ್ನು ಬಟವಾಡೆ ಮಾಡುವುದಾಗಿ ಮುಖ್ಯಮಂತ್ರಿಗಳು ಭರವಸೆ ಕೊಟ್ಟಿರುವುದು ನಿಜವೇ ಎಂದು ಕೇಳಿರುವುದಕ್ಕೆ 'ಹೌದು' ಎಂದು ಉತ್ತರ ನೀಡಿದ್ದಾರೆ. ಆದುದರಿಂದ, ಮುಖ್ಯಮಂತ್ರಿಯವರು ಏನು ಹೇಳಿದ್ದಾರೆ ಅದನ್ನು ನಾನು ಹೇಳಿಲ್ಲ ಎನ್ನುವ ಪ್ರಶ್ನೆ ಬರುವುದಿಲ್ಲ, ಅಲ್ಲದೆ ಚರ್ಚೆ ಮಾಡಿಲ್ಲವೆನ್ನುವ ಮಾತೂ ಸಹ ಸರಿಯಲ್ಲ. ನಾನು ತಮ್ಮಿಂದ ತಿಳಿಯಬಯಸುವುದೇನೆಂದರೆ, ಈ ರೀತಿಯಾಗಿ ಮುಖ್ಯಮಂತ್ರಿಗಳು ಒಂದು ಭರವಸೆ ಕೊಡುವುದಕ್ಕಿಂತ ಮುಂಚಿತವಾಗಿ ಏನಾದರೂ ಎ.ಪಿ.ಎಂ.ಸಿ ಮುಖಾಂತರ ಹಣ ಬಟವಾಡೆ ಮಾಡಲಿಕ್ಕೆ ಎಷ್ಟು ಹಣ ಬೇಕಾಗುತ್ತದೆಂಬ ವಿಚಾರ ಸರ್ಕಾರದ ಗಮನದಲ್ಲಿದೆಯೇ? ಗಮನದಲ್ಲಿದ್ದರೆ ಎಷ್ಟು ಹಣ ಬೇಕಾಗುತ್ತದೆ? ಬೇಕಾಗುವಂಥ ಹಣವನ್ನು ಕ್ರೋಢೀಕರಿಸುವುದಕ್ಕೆ ಸರ್ಕಾರ ಏನು ಆಲೋಚನೆ ಮಾಡುತ್ತಿದೆ?

ಶ್ರೀ ರಾಮಲಿಂಗಾರೆಡ್ಡಿ : ಮಾನ್ಯ ಅಧ್ಯಕ್ಷರೆ, ನಾನು ಆಗಲೇ ಉತ್ತರ ಕೊಡುವಾಗ ಈ ಬಗ್ಗೆ ಹೇಳಿದ್ದೇನೆ. ಇಲಾಖೆಯಲ್ಲಿ ಈಗಿರತಕ್ಕಂಥ ಸಿಬ್ಬಂದಿ ಸಂಖ್ಯೆ ಏನೇನೂ ಸಾಲದಾಗಿದ್ದು, ಸಿಬ್ಬಂದಿ ಸಂಖ್ಯೆ ಹೆಚ್ಚಿಸುವುದಕ್ಕೆ ಕೋಟಿಗಟ್ಟಲೆ ಹಣ ಬೇಕಾಗುತ್ತದೆ. ಎಪಿಎಂಸಿಯಲ್ಲಿ ಸುಮಾರು 3700 ಕೋಟಿ ರೂಪಾಯಿಗಳ ವಹಿವಾಟು ನಡೆಯುತ್ತಿದ್ದು, ಸದರಿ ವಿಚಾರವನ್ನು ತೀವ್ರವಾಗಿ ಪರಿಶೀಲಿಸಲಾಗುತ್ತಿದೆ. ಇದಕ್ಕೆ ಎಷ್ಟು ಹಣಬೇಕು? ಮುಂತಾದ ವಿಚಾರ ಏನು ಕೇಳಿದ್ದೀರಿ ಇದಕ್ಕೆ ಮಾಹಿತಿ ಒದಗಿಸಲು ಸ್ವಲ್ಪ ಕಾಲಾವಕಾಶ ಕೊಟ್ಟರೆ ಒದಗಿಸಿಕೊಡುತ್ತೇನೆ.

ಶ್ರೀ ಎಚ್. ವಿಶ್ವಾನಾಥಯ್ಯ : ಎಷ್ಟು ಹಣ ಬೇಕಾಗಿದೆಯೆಂಬುದರ ಬಗ್ಗೆ ತಮಗೆ ಆಲೋಚನೆ ಇದೆಯೇ? ತಾವು ಹೇಳುತ್ತಿರುವುದರಲ್ಲೇನಾದರೂ ಅರ್ಥವಿದೆಯೇ? ಮುಖ್ಯಮಂತ್ರಿಗಳು ಏತಕ್ಕೋಸ್ಕರ ಭರವಸೆ ಕೊಟ್ಟರು? ತಾವು ಏತಕ್ಕೋಸ್ಕರ ಉತ್ತರ ಹೇಳುತ್ತಿದ್ದೀರಿ? ಇಂತಿಷ್ಟು ಹಣ ಬೇಕಾಗುತ್ತದೆಂದು ತಿಳಿದುಕೊಳ್ಳುವುದಕ್ಕೆ ಆಗದಿದ್ದರೆ ಇದು ಸರ್ಕಾರವೇ?

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರಾದ ಮಾನ್ಯ ಡಿ.ಬಿ. ಚಂದ್ರೇಗೌಡರು ಹೇಳಿದಂತೆ ಇಲ್ಲಿ ಜಂಟಿ ಜವಾಬ್ದಾರಿಯ ಸಮಸ್ಯೆ ಬಂದಿದೆ. ಮಾನ್ಯ ಮಂತ್ರಿಗಳು ಯಾವುದೋ ಒಂದು ವಿಚಾರ ಹೇಳಿದ್ದಾರೆ, ಅದು ಅವರ ಇಲಾಖೆಗೆ ಸಂಬಂಧಪಟ್ಟ ವಿಚಾರವಿರಬಹುದು. ಅದನ್ನು ಹೇಳುವುದಕ್ಕಿಂತ ಮುಂಚೆ ಅವರು ಕೇಳಬೇಕಾಗಿತ್ತೇ? ಇಲ್ಲವೇ? ಎನ್ನು ವಿಷಯಕ್ಕೆ ನಾನು ಹೋಗುವುದಿಲ್ಲ. ಆದರೆ ಒಮ್ಮೆ ಉತ್ತರ ಕೊಡುವಾಗ ಒಂದು ಸಾರಿ ಸ್ಪಷ್ಟವಾಗಿ ಮಂತ್ರಿಗಳು 'ಹೌದು' ಎಂದು ಹೇಳಿದ್ದಾರೆ. ಮುಖ್ಯಮಂತ್ರಿಯವರು ಈ ರೀತಿ ತಿಳಿಸಿರುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆಂದು ಮಾನ್ಯ ಸಚಿವರು ಹೇಳಿದರು. ಮುಖ್ಯಮಂತ್ರಿಗಳು ಏನು ಹೇಳಿದರು ಅದು ನನಗೆ ಗೊತ್ತಿಲ್ಲ, ನಾನು ಕೇಳಿಲ್ಲವೆಂದು ಹೇಳುವುದಾದರೆ, ಇಲ್ಲಿ ಉದ್ಭವಿಸುವ ಮುಖ್ಯವಾದ ವಿಚಾರ ಏನೆಂದರೆ, ಮಾನ್ಯ ಮುಖ್ಯಮಂತ್ರಿಗಳು ಹಲವಾರು ಭರವಸೆಗಳನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ಪ್ರಶ್ನೆಯೇ ಇಲ್ಲ. ಅವರು ಕೊಟ್ಟಿರುವ ಭರವಸೆಗಳು 'ಗಿನ್ನಿಸ್ ಪುಸ್ತಕ'ದಲ್ಲಿ ದಾಖಲೆಯಾಗಬಹುದು. ಆ ವಿವರಗಳಿಗೆ ನಾನು ಹೋಗುವುದಿಲ್ಲ. ಉದ್ಭವಿಸಿರುವ ಪ್ರಶ್ನೆಯೇನೆಂದರೆ, ಮುಖ್ಯಮಂತ್ರಿಯವರು ಏನು

ಹೇಳಿದ್ದಾರೆ ಅದನ್ನು ತಾವು ತಮ್ಮ ಉತ್ತರದಲ್ಲಿ ಒಪ್ಪಿಕೊಂಡಿದ್ದೀರಿ. ಆದುದರಿಂದ, ಇವೊತ್ತು ತಾವು ಸ್ಪಷ್ಟವಾಗಿ ಹೇಳಬೇಕಾಗುತ್ತದೆ; ನೀವು ಜಂಟಿ ಜವಾಬ್ದಾರಿಯಿಂದ ಕೆಲಸ ಮಾಡುತ್ತಿದ್ದೀರಾ? ಇಲ್ಲವೇ? ಒಂದು ವೇಳೆ ಜಂಟಿ ಜವಾಬ್ದಾರಿಯಿಂದ ಕೆಲಸ ಮಾಡಲಿಲ್ಲವೆಂದರೆ ಪ್ರಸ್ತುತ ನೀವು ಯಾವ ಸ್ಥಾನದಲ್ಲಿದ್ದೀರೋ ಅಲ್ಲಿರುವುದಕ್ಕೆ ನಿಮಗೆ ಅಧಿಕಾರವಿಲ್ಲ ಅಥವಾ ಮುಖ್ಯಮಂತ್ರಿಗಳು ತಮ್ಮ ಸ್ಥಾನದಲ್ಲಿರುವುದಕ್ಕೆ ಅಧಿಕಾರವಿಲ್ಲ. ಆ ದೃಷ್ಟಿಯಿಂದ ಒಂದು ನಿರ್ಣಯ ಆಗಬೇಕಾಗುತ್ತದೆ. ತಮ್ಮನ್ನು ಕಷ್ಟದಲ್ಲಿ ಸಿಲುಕಿಸಬೇಕೆಂಬ ಉದ್ದೇಶದಿಂದ ಹೇಳುತ್ತಿಲ್ಲ, ಯಾವ ನೀತಿ-ನಿಯಮಗಳನ್ವಯ ಸದನದ ಕಾರ್ಯಕಲಾಪಗಳು ನಡೆಯಬೇಕೋ, ಸರ್ಕಾರ ನಡೆಯಬೇಕೋ ಆ ಪ್ರಕಾರ ನಡೆದುಕೊಳ್ಳಬೇಕಾಗುತ್ತದೆ. ಹಾಗಾಗಿ, ತಮ್ಮ ಉತ್ತರದಲ್ಲಿ ಏನು ಹೇಳಿದ್ದೀರಿ, ಅದು ಸರಿ ಇದ್ದರೆ ಸರಿ ಎಂದು ಹೇಳಿ ಮತ್ತು ಜಂಟಿ ಜವಾಬ್ದಾರಿ ಬಗ್ಗೆ ಸ್ಪಷ್ಟವಾದ ವಿವರ ಕೊಡಬೇಕು ಅಥವಾ ಏನು ಉತ್ತರ ಕೊಟ್ಟಿದ್ದೀರಿ ಅದು ಸರಿಯಿಲ್ಲ, ತಪ್ಪು ಮಾಹಿತಿಯಿಂದ ಉತ್ತರ ಕೊಡಲಾಗಿದೆಯೆಂದರೆ ಅದನ್ನು ಹಿಂತೆಗೆದುಕೊಳ್ಳಿ. ಇವೆರಡು ವಿಚಾರಗಳ ಬಗ್ಗೆ ಸ್ಪಷ್ಟೀಕರಣ ಕೊಡಿ.

ಶ್ರೀ ಹಾರನಳ್ಳಿ ರಾಮಸ್ವಾಮಿ : ಮಾನ್ಯ ಸದಸ್ಯರಾದ ಚಂದ್ರೇಗೌಡರು ಈಗ ಎತ್ತಿರುವ ಪ್ರಶ್ನೆಗೆ ವಿಕಾಂತಯ್ಯನವರ ವಿವರಣೆಯಿಂದ ಅಲ್ಲಿಯೇ ಉತ್ತರ ಸಿಕ್ಕಿದೆ. ಮುಖ್ಯಮಂತ್ರಿಗಳು ಏನು ಹೇಳಿದ್ದಾರೋ ಆ ಮಾತನ್ನೇ ಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಮತ್ತು ಅದನ್ನು ಯಾವಾಗ ಹೇಗೆ ಅನುಷ್ಠಾನಗೊಳಿಸಲಾಗುವುದೆಂಬ ಬಗ್ಗೆ ಮಂತ್ರಿಗಳು ಪರಿಶೀಲಿಸುತ್ತೇವೆಂದು ಹೇಳಿದ್ದಾರೆ. ಆದುದರಿಂದ, ಈ ವಿಚಾರದಲ್ಲಿ ಯಾವುದೇ ವಿಧದಲ್ಲೂ ಪರಸ್ಪರ ವಿರುದ್ಧ ಅಭಿಪ್ರಾಯಗಳು ಬಂದಿಲ್ಲ, ಅದು ದಾಖಲೆಗೂ ಹೋಗಿಲ್ಲ, ಮಾನ್ಯ ಮುಖ್ಯಮಂತ್ರಿಗಳು ಹೇಳಿರುವುದರಲ್ಲೂ ಬಂದಿಲ್ಲ.

ಶ್ರೀ ಎಚ್. ವಿಕಾಂತಯ್ಯ : ಸರ್ಕಾರಕ್ಕೆ ಭರವಸೆ ಕೊಡುವುದೇ ಒಂದು ಪದ್ಧತಿಯಾಗಿ ಬೆಳೆದು ಬಂದಿದೆ. ನಾನು ಕೇಳುತ್ತಿರುವುದೇನೆಂದರೆ, ಯಾವುದೇ ಪೂರ್ವಾಪರ ಆಲೋಚನೆ ಇಲ್ಲದೆ ಭರವಸೆ ಕೊಡುವ ಪ್ರವೃತ್ತಿ ಏನಿದೆ, ಅದರ ಆಧಾರದ ಮೇಲೆ ನೀವು ಉತ್ತರ ಕೊಟ್ಟಿದ್ದೀರಾ? ಅಥವಾ ಇಷ್ಟು ಹಣ ಬೇಕಾಗಿದ್ದರೆ ನೀವೇನಾದರೂ ನಿರ್ದಿಷ್ಟವಾಗಿ ಹೇಳುತ್ತಿದ್ದೀರಾ? ಸುಮ್ಮನೆ ಭರವಸೆ ಕೊಟ್ಟರೆ.....

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ಮುಖ್ಯವಾಗಿ ಅವರು (ಹಾರನಳ್ಳಿ ರಾಮಸ್ವಾಮಿ) ಮಂತ್ರಿಗಳು ಕೊಟ್ಟ ಉತ್ತರವನ್ನೂ ಕೇಳಲಿಲ್ಲ, ಮತ್ತು ಸದನದ ಕಡತದಲ್ಲಿ ಏನು ಆಗಲೇ ಮಾತನಾಡಿರುವುದು ದಾಖಲಾಗಿದೆಯೋ ಅದನ್ನೂ ನೋಡಲಿಲ್ಲ, ಆದರೂ ಅವರು ಹೇಳಿಬಿಟ್ಟರು. ಅವರು ಹೇಳಿರುವುದೂ ಸರಿ ಇದೆ, ದಾಖಲೆಯಲ್ಲಿಯೂ ಸರಿ ಇದೆ. ಆದುದರಿಂದ, ದಯವಿಟ್ಟು ದಾಖಲೆ ತರಿಸಿ. ಮಾನ್ಯ ಪ್ರೊ।ಎಂ.ಡಿ. ನಂಜುಂಡಸ್ವಾಮಿಯವರು ಹೇಳಿರುವುದು, ಮುಖ್ಯಮಂತ್ರಿಯವರು ಹೇಳಿರುವುದು ಸರಿಯಲ್ಲ ನಮ್ಮ ಜೊತೆ ಸಂಪರ್ಕಿಸಿಲ್ಲವೆಂದು ಅವರು ಹೇಳುತ್ತಾರೆ. ಆ ಕಾರಣಕ್ಕಾಗಿಯೇ ನಾನು ಜಂಟಿ ಜವಾಬ್ದಾರಿಯ ಪ್ರಶ್ನೆ ಎತ್ತಿದೆ. ತಾವು ದಾಖಲೆ ತರಿಸಿ. ತಾವು (ಹಾರನಳ್ಳಿ ರಾಮಸ್ವಾಮಿ) ಹೆಚ್ಚು ಗೌರವದಿಂದ, ಜವಾಬ್ದಾರಿಯಿಂದ ಉತ್ತರ ಕೊಡುತ್ತೀರೆಂಬ ನಿರೀಕ್ಷೆ ನಮಗಿದೆ.

ಶ್ರೀ ಹಾರನಳ್ಳಿ ರಾಮಸ್ವಾಮಿ : ಇದು ಕ್ಲಾರಿಫೈಯಾಗಿದೆ, ವಿವರಣೆಯನ್ನು ಹೇಳಿಯಾಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ನೀವು ಹೇಳೋದೆಲ್ಲಾ ವೇದವಾಕ್ಯವಲ್ಲ, ದಾಖಲೆಯಲ್ಲಿ ಏನಿದೆ ಅದನ್ನು ನೋಡಿ, ಮುಖ್ಯಮಂತ್ರಿಗಳು ಬೆಳಗಾವಿಯಲ್ಲೇನು ಹೇಳಿದ್ದಾರೆ ಅದು ನನಗೆ ಗೊತ್ತಿಲ್ಲ ಎನ್ನತಕ್ಕ ಮಾತನ್ನು ಅವರು ಹೇಳಿದ್ದಾರೆ.

ಶ್ರೀ ಎಂ.ಪಿ. ವೆಂಕಟೇಶ್: ಅವರು ಈ ರೀತಿ ಹೇಳಲಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಅದು ದಾಖಲೆಯಲ್ಲಿದೆ, ಅದನ್ನು ತೆಗೆದು ಇದರ ಬಗ್ಗೆ ತೀರ್ಮಾನವಾಗದ ಹೊರತು ಈ ಸರ್ಕಾರಕ್ಕೆ ಜಂಟಿ ಜವಾಬ್ದಾರಿಯಿಲ್ಲವೆನ್ನತಕ್ಕ ಅತ್ಯಂತ ದೊಡ್ಡ ಆಪಾದನೆಯನ್ನು ನಾವು ಮಾಡಬೇಕಾಗುತ್ತದೆ. ಅದಕ್ಕೆ ಅವಕಾಶವಾಗಬಾರದೆಂದಿದ್ದರೆ ದಾಖಲೆಯನ್ನು ತೆಗೆಸಿ.

ಶ್ರೀ ಹಾರನಳ್ಳಿರಾಮಸ್ವಾಮಿ : ಮಾನ್ಯ ಸದಸ್ಯರು, ಮುಖ್ಯಮಂತ್ರಿಗಳು ಹಿಂದುಮುಂದು ವಿಚಾರ ಮಾಡದೆ ಮಾತನಾಡುತ್ತಾರೆಂದು ಹೇಳುವುದು ಸರಿಯಲ್ಲ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ತಮಗೆ ಇನ್ನೂ ಅವಮಾನವಾಗಿಲ್ಲವೆ? ತಮ್ಮ ಹೇಳಿಕೆಗಳು ಕೇವಲ ಸುಳ್ಳು ಎಂದು ಇಡೀ ರಾಜ್ಯಕ್ಕೇ ಗೊತ್ತಿದೆ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಮುಖ್ಯಮಂತ್ರಿಗಳಲ್ಲಿ ನಾವು ತುಂಬಾ ಗೌರವವನ್ನಿಟ್ಟು ಕೊಂಡಿದ್ದೇವೆ. ಈ ರಾಜ್ಯದ ಮುಖ್ಯಮಂತ್ರಿಗಳು ಎನ್ನತಕ್ಕ ಒಂದು ದೊಡ್ಡ ರೀತಿಯಲ್ಲಿ ನಾವು ಏನು ಗೌರವವನ್ನಿಟ್ಟು ಕೊಂಡಿದ್ದೇವೆ, ಒಬ್ಬೊಬ್ಬರಿಗೆ ಒಂದೊಂದು ಕೀರ್ತಿ ಇರುತ್ತದೆ; ವೀರಪ್ಪಮೊಯಿಲಿಯವರಿಗೆ ಸುಳ್ಳು ಹೇಳತಕ್ಕ ಒಂದು ಕೀರ್ತಿ ಇದೆ.

ಶ್ರೀ ಹಾರನಳ್ಳಿ ರಾಮಸ್ವಾಮಿ : ಮಾನ್ಯ ಚಂದ್ರೇಗೌಡರು ಬಹಳ ಕಿರಿಯರು, ಎಲ್ಲಾ ಕ್ಷೇತ್ರಗಳಲ್ಲೂ ಕೆಲಸಮಾಡಿ ಅನುಭವವನ್ನು ಹೊಂದಿರತಕ್ಕವರು.

ಮಾನ್ಯ ಮುಖ್ಯಿ ಮಂತ್ರಿಯವರು ಸಾರ್ವಜನಿಕವಾಗಿ ಘೋಷಣೆಯನ್ನು ಮಾಡಬೇಕಾದರೆ ಸಮಸ್ಯೆಗಳ ಗಂಭೀರತೆಯನ್ನು ತಿಳಿದುಕೊಂಡು,ಸಮಸ್ಯೆಗೆ ಪರಿಹಾರಪೂರ್ವಕವಾಗಿ ಹೇಳುತ್ತಾರೆ. ಅದು ಆಚರಣೆಗೆ ಬರಬೇಕಾದರೆ ಮಂತ್ರಿಮಂಡಲದ ಸಭೆಯಲ್ಲಿ ತೀರ್ಮಾನವಾಗಬೇಕಾಗುತ್ತದೆ. ತಾವೂ ಮಂತ್ರಿಗಳಾಗಿದ್ದವರು, ಇದರ ಬಗ್ಗೆ ತಮಗೆಲ್ಲರಿಗೂ ಗೊತ್ತಿದೆ. ಉದಾಹರಣೆಗೆ, ಮೊನ್ನೆ ಹುಬ್ಬಳ್ಳಿಯಲ್ಲಾದ ಗೋಲಿಬಾರ್ನ ಬಗ್ಗೆ ನ್ಯಾಯಾಂಗ ತನಿಖೆಯನ್ನು ಮಾಡುತ್ತೇವೆ ಎಂದು ಮೊದಲೇ ಷೋಷಣೆ ಮಾಡಿದರು. ಆ ವಿಷಯ ಅನಂತರ ಮಂತ್ರಿಮಂಡಲದ ಸಭೆಗೆ ಬಂದು ಒಪ್ಪಿಗೆಯನ್ನು ಪಡೆದ ಮೇಲೆ ಅದು ಶಾಸನಾತ್ಮಕ ಸ್ವರೂಪವನ್ನು ಪಡೆದುಕೊಂಡಿತು. ಆ ರೀತಿ ಶಾಸನದ ಸ್ವರೂಪ ಬರಬೇಕಾಗುತ್ತದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳೇನು ಹೇಳಿದ್ದಾರೆ ಅದನ್ನೇ ಜಾರಿಗೊಳಿಸತಕ್ಕದ್ದು, ಅದರ ಮುಂದಿನ ವಿಚಾರ ಹೇಗೆ ಎನ್ನತಕ್ಕ ಬಗ್ಗೆ ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡಲು ಸ್ವಲ್ಪ ಸಮಯ ಕೇಳಿದ್ದಾರೆ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಅಧ್ಯಕ್ಷರೇ, ತಮ್ಮ ಅಭಿಪ್ರಾಯವೇನು?

ಅಧ್ಯಕ್ಷರು : ಮಂತ್ರಿಗಳು ಸಮಗ್ರವಾಗಿ ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಂತ್ರಿಗಳು ಬೇಜವಾಬ್ದಾರಿಯಿಂದ ಉತ್ತರವನ್ನು ಈ ಸದನಕ್ಕೆ ಕೊಡಲು ಆಗುವುದಿಲ್ಲ. ಮುಖ್ಯಮಂತ್ರಿಗಳು ಏನು ಹೇಳಿದ್ದಾರೆ ಎನ್ನತಕ್ಕದ್ದನ್ನು ಅವರನ್ನು ಸಂಧಿಸಿ ಹೇಳುತ್ತೇನೆ ಎನ್ನತಕ್ಕ ವ್ಯವಸ್ಥೆಯಾಗಬಾರದು. ಇದನ್ನು ತಾವು ಸಹಿಸಬಾರದು. ಇದು ಸದನದ ಗೌರವದ ಪ್ರಶ್ನೆ, ರಾಜ್ಯಾಂಗದ ಹಕ್ಕಿನ ಪ್ರಶ್ನೆ. ಇದರಲ್ಲಿ ಜಂಟಿ ಜವಾಬ್ದಾರಿಯ ಅತ್ಯಂತ ದೊಡ್ಡ ಹೊಣೆಗಾರಿಕೆಯ ಪ್ರಶ್ನೆ ಇದೆ. ಇದರಿಂದ ನುಣುಚಿಕೊಳ್ಳತಕ್ಕ ಕೆಲಸ ಸರಿಯಲ್ಲ. ಒಂದು ಅವರು ಹೇಳಿರತಕ್ಕ

ಉತ್ತರ ತಪ್ಪು ಎಂದಾದರೂ ಹೇಳಬೇಕು, ಇಲ್ಲದಿದ್ದರೆ ಮುಖ್ಯಮಂತ್ರಿಗಳೇನು ಹೇಳಿದ್ದಾರೆ ಆ ವಿಷಯವನ್ನು ಕ್ಯಾಬಿನೇಟ್ಗೆ ತೆಗೆದುಕೊಂಡು ಹೋಗಿ ಅದರಂತೆ ತೀರ್ಮಾನ ತೆಗೆದುಕೊಳ್ಳುತ್ತೇವೆಂದು ಹೇಳಬೇಕು. ಅವೆರಡರಲ್ಲಿ ಒಂದು ಆಗಬೇಕು. ಅವರ ಉತ್ತರವನ್ನು ಅವರು ಹಿಂದಕ್ಕೆ ತೆಗೆದುಕೊಳ್ಳಬೇಕು. ಅವರು ಆ ರೀತಿ ಹೇಳಲಿಲ್ಲವೆಂಬುದನ್ನು ಹೇಳಿದರು. ತಾವು ದಾಖಲೆಯನ್ನು ತರಿಸಿ ನೋಡಿ. ಬೇಕಾದರೆ ಸ್ವಲ್ಪ ಸಮಯ ತೆಗೆದುಕೊಂಡು ದಾಖಲೆ ತರಿಸಿ ನೋಡಿ. ಅವರು ಆ ರೀತಿ ಹೇಳಲಿಲ್ಲವೆನ್ನತಕ್ಕ ಮಾತನ್ನು ಅಷ್ಟೊಂದು ಲಘುವಾಗಿ ತೆಗೆದುಕೊಳ್ಳಲಾಗುವುದಿಲ್ಲ. We cannot evade the responsibilities casted on all of us.

ರಾಜ್ಯ ಸರ್ಕಾರದಿಂದ ಗೊಬ್ಬರಕ್ಕೆ ಸಹಾಯಧನ

45 -ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರತಿ ವರ್ಷವೂ ರಾಜ್ಯ ಸರ್ಕಾರ ರೈತರು ಕೊಳ್ಳುವ ಗೊಬ್ಬರಕ್ಕೆ ಸಬ್ಸಿಡಿ ನೀಡುತ್ತಿದ್ದುದು ನಿಜವೇ, ಹಾಗಿದ್ದಲ್ಲಿ ಈ ವರ್ಷವೂ ಸದರಿ ರಿಯಾಯಿತಿಯು ಜಾರಿಯಲ್ಲಿದೆಯೇ? ಹಾಗಿಲ್ಲದಿದ್ದಲ್ಲಿ ಕಾರಣವೇನು?

ಆ) ಹಾಗಿದ್ದಲ್ಲಿ ಯಾವ ತಿಂಗಳಿಂದ ರೈತರಿಗೆ ಗೊಬ್ಬರ ಸಬ್ಸಿಡಿ ನೀಡಲಾಗುತ್ತಿದೆ.

ಇ) 1993-94ನೇ ಸಾಲಿನಲ್ಲಿ ಜಿಲ್ಲಾವಾರು ನೀಡಿದ ಸಬ್ಸಿಡಿ ಹಣ ಎಷ್ಟು? 1994-95ನೇ ಸಾಲಿಗೆ ನೀಡುವ ಹಣ ಎಷ್ಟು?

ಶ್ರೀ ಹೆಚ್.ಎಂ. ರೇವಣ್ಣ (ಕೃಷಿ ಸಚಿವರು) :

ಅ) 1992-93ನೇ ಸಾಲಿನ ಹಿಂಗಾರು ಬೇಸಿಗೆ ಹಂಗಾಮಿನಿಂದ ರೈತರು ಕೊಳ್ಳುವ ಅನಿಯಂತ್ರಣದಲ್ಲಿರುವ ರಸಗೊಬ್ಬರಗಳಿಗೆ ಸಬ್ಸಿಡಿ ನೀಡಲಾಗುತ್ತಿದೆ. ಈ ವರ್ಷವೂ ಸಹ ಈ ರಿಯಾಯಿತಿ ಯೋಜನೆಯು ಜಾರಿಯಲ್ಲಿದೆ.

ಆ) ರಾಜ್ಯದಲ್ಲಿ ಈ ವರ್ಷ ದಿನಾಂಕ : 16-6-1994 ರಿಂದ ಈ ಯೋಜನೆಯನ್ನು ಜಾರಿಗೊಳಿಸಲಾಗಿದ್ದು, ರೈತರಿಗೆ ಸಬ್ಸಿಡಿ ದರದಲ್ಲಿ ರಸಗೊಬ್ಬರಗಳನ್ನು ಪೂರೈಸಲಾಗುತ್ತಿದೆ.

1993-94ನೇ ಸಾಲಿನಲ್ಲಿ ನೀಡಿದ ಜಿಲ್ಲಾವಾರು ಸಬ್ಸಿಡಿ ಹಣದ ವಿವರವನ್ನು ಲಗತ್ತಿಸಲಾಗಿದೆ.

1994-95ನೇ ಸಾಲಿನಲ್ಲಿ ನೀಡುವ ಹಣವನ್ನು ನಿಗದಿಪಡಿಸಿಲ್ಲ, ಇದು ವಿತರಣೆಯಾಗುವ ರಸಗೊಬ್ಬರದ ಪ್ರಮಾಣವನ್ನು ಅವಲಂಬಿಸಿದ್ದು, ಪ್ರಮಾಣವನ್ನು ಮಿತಿಗೊಳಿಸಿಲ್ಲ.

ವಿತರಣೆಯಾಗುವ ಪೂರ್ತ ಪ್ರಮಾಣಕ್ಕೆ ಸಬ್ಸಿಡಿಯನ್ನು ಸಂಬಂಧಪಟ್ಟ ತಯಾರಕರಿಗೆ ಕೇಂದ್ರ ಸರ್ಕಾರವೇ ನೇರವಾಗಿ ನೀಡುವುದು.

1993-94ನೇ ಸಾಲಿನಲ್ಲಿ ಜಿಲ್ಲಾವಾರು ನೀಡಿರುವ ಸಹಾಯಧನ ಮತ್ತು ಅದರ ಬಳಕೆಯ ವಿವರಗಳು

ಕ್ರಮ ಸಂಖ್ಯೆ	ಜಿಲ್ಲೆಗಳು	ಸಬ್ಸಿಡಿ ಹಣ (ಲಕ್ಷರೂ.ಗಳಲ್ಲಿ)
1.	ಬೆಂಗಳೂರು ನಗರ	143.53
2.	ಬೆಂಗಳೂರು ಗ್ರಾಮಾಂತರ	125.14
3.	ಕೋಲಾರ	203.91